# 1 ನೇ ಹೆಚ್ಚುವರಿ  ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು

## ಕ್ರಿಮಿನಲ್ ಪ್ರಕರಣ ಸಂಖ್ಯೆ :  1367/2023

ಪಿರ್ಯಾದುದಾರರು   :   ಎಂ.ಡಿ.ಸಿ.ಸಿ ಬ್ಯಾಂಕ್
ಮದ್ದೂರು ಶಾಖೆ, ಪ್ರತಿನಿಧಿಸುವವರು: ವ್ಯವಸ್ಥಾಪಕರು.

**ವಿರುದ್ಧ**

**ಆರೋಪಿ   -   :   ಶ್ರೀ.ಎಂ.ಆರ್.ಪ್ರಸನ್ನ ಕುಮಾರ್**
**ಬಿನ್ ಲೇಟ್ ರಾಮೇಗೌಡ, 42 ವರ್ಷ,**
ಮದ್ದೂರಿನ ಶಿಂಷಾ ಸಹಕಾರ ಬ್ಯಾಂಕ್ ನಲ್ಲಿ ಕೆಲಸ,
ವಾಸ : ಕೆ.ಹೆಚ್.ನಗರ,
ಮದ್ದೂರು ಟೌನ್,  ಮಂಡ್ಯ ಜಿಲ್ಲೆ.

## <u>ಆಪಾದನೆ</u>

ಈ ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ ಕಾನೂನು ಬದ್ದ ಅವಶ್ಯಕತೆಗಾಗಿ ದಿನಾಂಕ:23.03.2021 ರಂದು ರೂ.4,00,000/- ಹಣವನ್ನು ಸಾಲವಾಗಿ ಪಡೆದಿದ್ದು, ನಂತರ ಬಾಕಿ ಉಳಿದ ರೂ.3,20,000/- ಹಣದ ಪಾವತಿಗಾಗಿ ನಿಮ್ಮ ಎಸ್.ಬಿ.ಐ ಬ್ಯಾಂಕ್, ಮದ್ದೂರು ಶಾಖೆಯ ಚೆಕ್ ಸಂಖ್ಯೆ 457109 ಮೊತ್ತ 3,20,000/- ಹಣವನ್ನು ನಮೂದಿಸಿದ್ದು ದಿನಾಂಕ:17.04.2023 ರಂದು ಬ್ಯಾಂಕಿನಿಂದ ಪಡೆದುಕೊಳ್ಳುವಂತೆ ಪಿರ್ಯಾದಿಗೆ ನೀಡಿದ್ದು, ಸದರಿ ಚೆಕ್ ಅನ್ನು ನಗದೀಕರಿಸಲು ಪಿರ್ಯಾದಿಯು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮದ್ದೂರು ಶಾಖೆಗೆ ಹಾಜರು ಪಡಿಸಿದಾಗ ಸದರಿ ಬ್ಯಾಂಕ್ ನವರು " **Funds Insufficient** ” ಎಂಬ ಹಿಂಬರಹದೊಂದಿಗೆ ದಿನಾಂಕ 19.04.2023 ರಂದು ಸದರಿ ಚೆಕ್ ಅಮಾನ್ಯ ಮಾಡಿದ್ದು, ಆ ಸಂಬಂಧ ಪಿರ್ಯಾದಿಯು ದಿನಾಂಕ:17.05.2023 ರಂದು ನಿಮಗೆ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ ನಿಮಗೆ ದಿನಾಂಕ:

19.05.2023 ರಂದು ಖುದ್ದು ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಹಣವನ್ನು ಪಾವತಿ ಮಾಡಿರುವುದಿಲ್ಲ. ಆ ಮೂಲಕ ಲಿಖಿತ ವರ್ಗಾವಣೆಗಳ ಅಧಿನಿಯಮ ಕಲಂ-138 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುವುದಾಗಿ ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಪ್ರಶ್ನೆ-1 ಃ ಈ ಮೇಲೆ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೇ ?

ಆರೋಪಿ ಉತ್ತರ ಃ

ಪ್ರಶ್ನೆ-2 ಃ ನೀವು ಆಪಾದನೆಯನ್ನು ಒಪ್ಪುಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

ಆರೋಪಿ ಉತ್ತರ ಃ

( ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 14 .08.2024 ರಂದು ಸಹಿ ಮಾಡಿರುತ್ತಾರೆ)

(ನಳಿನ ಎಸ್.ಸಿ.)
1 ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿ
ಮತ್ತು ಜೆಎಂಎಫ್‌ಸಿ ನ್ಯಾಯಾಲಯ,

**ಆರೋಪಿ ಸಹಿ ಃ**